# ಶ್ರೀಚೈತನ್ಯ ಮಹಾಪ್ರಭು – ೮

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

ಸ್ವಾಮಿ ತಪಸ್ಯಾನಂದ

**ಚೈತನ್ಯರ ವ್ಯಕ್ತಿತ್ವದಲ್ಲಿ ರಾಧಾ–ಕೃಷ್ಣ ಭಾವಗಳ ಮಿಲನ**

ಶ್ರೀಚೈತನ್ಯ ಮತ್ತು ರಾಮಾನಂದ ರಾಯ್ ರಾಧಾಕೃಷ್ಣರು ಪ್ರಕಟಪಡಿಸಿದ ದಿವ್ಯಪ್ರೇಮವನ್ನು ಕುರಿತು ದೀರ್ಘಕಾಲ ಸಂಭಾಷಣೆ ನಡೆಸಿದರು. ಅದಲ್ಲದೆ ಹಾಡುತ್ತ, ನರ್ತಿಸುತ್ತ ರಾತ್ರಿಗಳನ್ನು ಕಳೆದರು. ಹೀಗೆಯೇ ಹತ್ತು ದಿನ ಕಳೆದವು. ಕಡೆಯಲ್ಲಿ ಚೈತನ್ಯ ಮಹಾಪ್ರಭುವು ರಾಮಾನಂದನಿಗೆ ತನ್ನ ನಿಜ ಸ್ವರೂಪವನ್ನು ಪ್ರಕಟಿಸಿದರು. ಸನ್ಯಾಸಿಯ ರೂಪವು ಅದೃಶ್ಯವಾಯಿತು; ಅದರ ಸ್ಥಾನದಲ್ಲಿ ಭಾವರಾಜ್ಯದ ಚಕ್ರವರ್ತಿಯಾದ ಶ್ರೀಕೃಷ್ಣ ಮತ್ತು ಪರಮಾನಂದ ಸ್ವರೂಪಳಾದ ರಾಧೆ – ಇವರಿಬ್ಬರೂ ಕೂಡಿಕೊಂಡಿರುವಂತಹ ಒಂದು ಅದ್ಭುತರೂಪದ ದರ್ಶನವಾಯಿತು. ಚೈತನ್ಯರ ಅವತಾರದಲ್ಲಿ ಶ್ರೀಕೃಷ್ಣನು ರಾಧೆಯ ಭಾವ ಮತ್ತು ಸೌಂದರ್ಯಗಳನ್ನು ಧರಿಸಿಕೊಂಡಿದ್ದಾನೆ ಎಂದು ಈಗ ರಾಯ್ ಅರಿತುಕೊಂಡರು. ರಾಧೆಯ ಭಾವದಲ್ಲಿದ್ದುಕೊಂಡು ತನ್ನ ಸ್ವರೂಪಾಂಶವಾದ ಪರಮಾನಂದವನ್ನು ತಾನೇ ಸವಿಯುವುದೇ ಕೃಷ್ಣನ ಉದ್ದೇಶವಾಗಿತ್ತು. ಈ ರೂಪವನ್ನು ನೋಡಿದ ರಾಯ್ ಉನ್ಮತ್ತರಾದರು. ಶ್ರೀಚೈತನ್ಯ ಪ್ರಭುವು ರಾಯರನ್ನು ಸ್ಪರ್ಶಿಸಿ ಅವರನ್ನು ಬಾಹ್ಯಪ್ರಜ್ಞೆಗೆ ಕರೆತಂದರು. ರಾಯ್ ತನ್ನ ನಿಜಸ್ವರೂಪವನ್ನು ಅರಿತುಕೊಂಡಿದ್ದಾರೆ ಎನ್ನುವುದನ್ನು ಪ್ರಭುವು ದೃಢೀಕರಿಸಿ ಹೀಗೆ ಹೇಳಿದರು. "ನಾನು ನಿನಗೆ ಈ ರೂಪವನ್ನು ತೋರಿಸಿದ್ದೇನೆ. ನನ್ನ ಶರೀರ ಚಿನ್ನದ ಬಣ್ಣದ್ದಲ್ಲ. ಈಗ ನೀನು ನನ್ನಲ್ಲಿ ಕಾಣುತ್ತಿರುವ ಬಂಗಾರದ ಬೆಳಕು ರಾಧೆಯ ಸ್ಪರ್ಶದಿಂದ ಉಂಟಾದುದು. ಗೋಪಾಲಕೃಷ್ಣನನ್ನು ಬಿಟ್ಟು ಬೇರೆ ಯಾರನ್ನೂ ಅವಳು ಸ್ಪರ್ಶಿಸುವುದಿಲ್ಲ. ಅವಳ ಭಾವನೆಗಳನ್ನು ನನ್ನ ಹೃದಯದಲ್ಲಿ ಭಾವಿಸಿಕೊಳ್ಳುತ್ತಾ ಶ್ರೀಕೃಷ್ಣನ ಅನುಪಮ ಮಾಧುರ್ಯವನ್ನು ಸವಿಯುತ್ತೇನೆ. ಈ ವಿಚಾರವನ್ನು ರಹಸ್ಯವಾಗಿರಿಸು." ಹತ್ತು ದಿನಗಳಾಯಿತು. ಮಹಾಪ್ರಭುವು ಹೊರಡುವ ಸಮಯ ಬಂತು. ಆಗ ರಾಯ್‌ಗೆ ಅವರು ಹೀಗೆ ಆದೇಶವಿತ್ತರು: "ನಿನ್ನೆಲ್ಲ ಪ್ರಾಪಂಚಿಕ ಆಸಕ್ತಿಗಳನ್ನೂ ತ್ಯಜಿಸು. ಪುರೀಧಾಮಕ್ಕೆ ಹೋಗು. ನನ್ನ ತೀರ್ಥಯಾತ್ರೆಯನ್ನು ಮುಗಿಸಿಕೊಂಡು, ಬೇಗನೆ ನಾನಲ್ಲಿಗೆ ಹಿಂತಿರುಗುತ್ತೇನೆ. ಅಲ್ಲಿ ನಾವಿಬ್ಬರೂ ಒಟ್ಟಿಗೇ ಇರೋಣ; ಕೃಷ್ಣಲೀಲೆಯ ಸಂಕೀರ್ತನೆ ಮಾಡುತ್ತ ಆನಂದದಿಂದ ಕಾಲವನ್ನು ಕಳೆಯೋಣ."

**ಇತರ ಸ್ಥಾನಗಳಲ್ಲಿ ನಡೆದ ಪ್ರಮುಖ ಸಂಗತಿಗಳು**

ಪಯಣವನ್ನು ಅವರು ಮುಂದುವರಿಸಿದರು; ರಾಮೇಶ್ವರ ಮತ್ತು ಕನ್ಯಾಕುಮಾರಿಯುವರೆಗಿನ ಎಲ್ಲ ಪ್ರಮುಖ ತೀರ್ಥಕ್ಷೇತ್ರಗಳಿಗೂ ಭೇಟಿಕೊಟ್ಟರು. ಪ್ರತಿಯೊಂದು ಜಾಗದಲ್ಲೂ ಸ್ವಲ್ಪ ಕಾಲ ಕಳೆದು ಬೇಗಬೇಗನೆ ಮುಂದಿನ ಜಾಗಕ್ಕೆ ಹೋಗುತ್ತಿದ್ದರು. ಕೆಲವು ಮಹತ್ವದ ಕ್ಷೇತ್ರಗಳಲ್ಲಿ ಮಾತ್ರ ಹೆಚ್ಚು ಕಾಲ ತಂಗುತ್ತಿದ್ದರು. ಅಂತಹ ಒಂದು ಕ್ಷೇತ್ರವೆಂದರೆ ಶ್ರೀರಂಗಂ. ಅಲ್ಲಿ ಅವರು ನಾಲ್ಕು ತಿಂಗಳ ಕಾಲ ನೆಲೆಸಿದ್ದರು. ಚಾತುರ್ಮಾಸ್ಯ ವ್ರತ ಕೈಗೊಂಡು ವೆಂಕಟಭಟ್ಟನೆಂಬ ಶ್ರದ್ಧಾಳುವಿನ ಮನೆಯಲ್ಲಿ ಇದ್ದರು. ಪ್ರತಿದಿನವೂ ಕಾವೇರಿಯಲ್ಲಿ ಅವರು ಸ್ನಾನ ಮಾಡುವರು; ಶ್ರೀರಂಗನಾಥನ ಮೂರ್ತಿಯೆದುರು ಹಾಡಿ ಕುಣಿಯುವರು. ಆಗ ಅಲ್ಲೊಂದು ಘಟನೆ ನಡೆಯಿತು. ಒಬ್ಬ ಬ್ರಾಹ್ಮಣ ಪ್ರತಿನಿತ್ಯ ದೇವರ ಮುಂದೆ ಭಗವದ್ಗೀತೆಯ ಪಾರಾಯಣ ಮಾಡುತ್ತಿದ್ದ. ಅವನಿಗೆ ಗೀತೆಯ ಒಂದಕ್ಷರವೂ ಅರ್ಥವಾಗಿರಲಿಲ್ಲ. ಅಲ್ಲಿಗೆ ಅನೇಕ ವಿದ್ವಾಂಸರು ಬರುವರು; ಅವರೆಲ್ಲ ಅವನನ್ನು ನಿಂದಿಸಿ, ಹೀಯಾಳಿಸುತ್ತಿದ್ದರು. ಆದರೆ ಅವನು ಅವರನ್ನೆಲ್ಲ ಲೆಕ್ಕಿಸುತ್ತಿರಲಿಲ್ಲ. ಇನ್ನಿಲ್ಲದ ಗಮನದಿಂದ ಭಗವದ್ಗೀತೆಯನ್ನು ಅವನು ಪಠಿಸುತ್ತಿದ್ದನು. ಆ ಸಮಯದಲ್ಲಿ ಅವನ ಕಣ್ಣುಗಳಿಂದ ಆನಂದದ ಜಲ ಹರಿಯುತ್ತಿತ್ತು; ದೇಹ ಕಂಪನವಾಗುತ್ತಿತ್ತು. ಅದನ್ನು ಶ್ರೀ ಚೈತನ್ಯರು ನೋಡಿದರು. "ನಿನಗೆ ಸ್ಫೂರ್ತಿ ಕೊಡುವುದೂ ಉನ್ಮಾದವನ್ನುಂಟುಮಾಡುವುದೂ ಏನು?" ಎಂದು ಪ್ರಶ್ನಿಸಿದರು. ಅದಕ್ಕೆ ಅವನು ಹೀಗೆ ಉತ್ತರಿಸಿದನು: "ನಾನೊಬ್ಬ ಅವಿದ್ಯಾವಂತ. ಭಗವದ್ಗೀತೆಯ ವಾಕ್ಯಗಳ ಅರ್ಥ ನನಗೆ ತಿಳಿಯದು. ಆದರೂ, ನನ್ನ ಗುರುವಿನ ಆದೇಶದಂತೆ ಗೀತಾಪಾರಾಯಣ ಮಾಡುತ್ತಿದ್ದೇನೆ. ಹಾಗೆ ಮಾಡುವಾಗ ನನ್ನ ಹೃದಯದಲ್ಲಿ ಆನಂದವಾಗುತ್ತದೆ. ನನ್ನ ಮನಸ್ಸಿನ ಕಣ್ಣುಗಳ ಮುಂದೆ ಶ್ರೀಕೃಷ್ಣನ ಮೇಘಶ್ಯಾಮಲ ಮೂರ್ತಿ, ಅವನು ಅರ್ಜುನನ ರಥಕ್ಕೆ ಸಾರಥಿಯಾಗಿದ್ದು, ಮಾತನಾಡುತ್ತಿರುವ ದೃಶ್ಯ ಪ್ರತ್ಯಕ್ಷವಾಗುವುದು." ಇದನ್ನು ಕೇಳಿ ಮಹಾಪ್ರಭುವು ಹೀಗೆ ನುಡಿದರು: "ಅಯ್ಯಾ, ಗೀತೆಯನ್ನು ಪಠಿಸಲು ನಿನಗೊಬ್ಬನಿಗೆ ಮಾತ್ರ ಅರ್ಹತೆ ಇದೆಯಪ್ಪಾ. ಅದರ ಮರ್ಮವನ್ನು ತಿಳಿದವನೂ ನೀನೇಯೆ" ಎಂದರು.

ಶ್ರೀಚೈತನ್ಯರು ನೆಲೆಸಿದ್ದ ಮನೆಯ ಯಜಮಾನ ವೆಂಕಟಭಟ್ಟನು ಲಕ್ಷ್ಮೀನಾರಾಯಣಸ್ವಾಮಿಯ ಭಕ್ತ. ಅವನು ಶ್ರೀವೈಷ್ಣವ ಸಂಪ್ರದಾಯಕ್ಕೆ ಸೇರಿದವನು. ಅದರ ಪ್ರಕಾರ ನಾರಾಯಣ

ನೊಬ್ಬನೇ ಪರದೈವ. ಚೈತನ್ಯರು ಅನೇಕ ಹೇಳಿಕೆಗಳನ್ನೂ ಶಾಸ್ತ್ರವಾಕ್ಯಗಳನ್ನೂ ಉದಾಹರಿಸಿ, ಶ್ರೀಕೃಷ್ಣನೇ ಪರಮಾತ್ಮನೆಂದು ಅವನಿಗೆ ಮನಗಾಣಿಸಿದರು. 'ನಾರಾಯಣ' ರೂಪವು ಶ್ರೀಕೃಷ್ಣನ ಅಂಶವಷ್ಟೆ ಎನ್ನುವುದನ್ನು ತಿಳಿಯಪಡಿಸಿದರು. ಅವರು ವೆಂಕಟಭಟ್ಟನಿಗೆ ಹೀಗೆ ಹೇಳಿದರು: "ಶ್ರೀಕೃಷ್ಣನ ಮಾಧುರ್ಯ ಎಲ್ಲರ ಹೃದಯಗಳನ್ನೂ ಗೆಲ್ಲುವುದು. ವೃಂದಾವನದ ಜನರು ಅವನು ದೇವರೆಂದು ತಿಳಿಯರು; ತಮ್ಮಲ್ಲೇ ಒಬ್ಬನೆಂದು ಅವನನ್ನು ಪರಿಗಣಿಸುವರು. ವ್ರಜಭೂಮಿಯ ಒಡೆಯನೆಂದು ಅವನನ್ನು ಎಣಿಸುವರೇ ಹೊರತು ದೈವವೆಂದು ಅಲ್ಲ. ವೃಂದಾವನದ ಜನರಂತೆ ಶ್ರೀಕೃಷ್ಣನನ್ನು ಆರಾಧಿಸಿದರೆ ಮಾತ್ರ ಅವನನ್ನು ಪಡೆಯಲು ಸಾಧ್ಯ. ಆದರೂ, ನಾರಾಯಣ–ಕೃಷ್ಣ ಇವರಿಬ್ಬರೂ ಒಂದೇ. ಹಾಗೆಯೇ ಲಕ್ಷ್ಮಿ–ಗೋಪಿಯರೂ ಸಮಾನರು. ಗೋಪಿಯ ವೇಷದಲ್ಲಿ ಲಕ್ಷ್ಮಿ ಬರುವಳು; ಕೃಷ್ಣನ ಸಾನ್ನಿಧ್ಯವನ್ನು ಅನುಭವಿಸುವಳು. ಈ ಭಕ್ತಿತತ್ತ್ವದಲ್ಲಿ ಅನೇಕ ದೇವರುಗಳ ಕಲ್ಪನೆ ಇಲ್ಲ. ಭಕ್ತರು ಆ ಪರಮಪುರುಷನನ್ನು ವಿವಿಧ ಆಕೃತಿಗಳಲ್ಲಿ ಉಪಾಸಿಸುತ್ತಾರೆ, ಅಷ್ಟೆ" ಎಂದರು. ಶ್ರೀವೈಷ್ಣವನಾಗಿದ್ದ ವೆಂಕಟಭಟ್ಟನಲ್ಲಿ ಹೀಗೆ ಕೃಷ್ಣಭಕ್ತಿಯನ್ನು ಶ್ರೀಚೈತನ್ಯರು ಮೂಡಿಸಿದರು.

ನಂತರ ಅವರು ಮಧುರೆಗೆ ಬಂದರು. ರಾಮದಾಸನೆಂಬ ರಾಮಭಕ್ತನ ಮನೆಯಲ್ಲಿ ಉಳಿದರು. ಅವನಿಗೊಂದು ದುಃಖ ಬಾಧಿಸುತ್ತಿತ್ತು. ರಾವಣ ಸೀತೆಯ ಸ್ಪರ್ಶ ಮಾಡಿ ಹೊತ್ತೊಯ್ದ ಎನ್ನುವುದೇ ಅವನ ದುಃಖಕ್ಕೆ ಕಾರಣ. ಅದಕ್ಕಾಗಿ ಅವನು ಉಪವಾಸವನ್ನೂ ಮಾಡುತ್ತಿದ್ದನು. ಶ್ರೀಚೈತನ್ಯ ಮಹಾಪ್ರಭುಗಳು ಅವನನ್ನು ಸಂತೈಸಿದರು. ರಾವಣ ಕರೆದುಕೊಂಡು ಹೋಗಿದ್ದು ಮಾಯಾಸೀತೆಯನ್ನು ಎಂದು ಹೇಳಿದರು. ನಂತರ ರಾಮೇಶ್ವರದಲ್ಲಿ ಅವರು ಕೂರ್ಮಪುರಾಣ ಶ್ರವಣ ಮಾಡಿದಾಗ ಈ ಉಲ್ಲೇಖ ಬರುವುದನ್ನು ಆಲಿಸಿದರು. ಅಲ್ಲಿ ಹೀಗೆ ಹೇಳಿದೆ: "ಸೀತೆಯು ಅಗ್ನಿದೇವನ ರಕ್ಷಣೆಗೆ ಒಳಪಟ್ಟಳು. ಅವಳ ಜಾಗದಲ್ಲಿ ಮಾಯಾ ಸೀತೆ ನಿಂತಳು. ಅವಳನ್ನೇ ರಾವಣ ಎತ್ತಿಕೊಂಡು ಹೋದದ್ದು. ರಾವಣ ವಧೆಯ ನಂತರ ಅಗ್ನಿಪರೀಕ್ಷೆ ನಡೆಯಿತು. ಆ ಸಂದರ್ಭದಲ್ಲಿ, ನಿಜವಾದ ಸೀತೆಯನ್ನು ಅಗ್ನಿದೇವನು ಶ್ರೀರಾಮನಿಗೆ ಮತ್ತೆ ಒಪ್ಪಿಸಿದನು." ಚೈತನ್ಯರು ಈ ಭಾಗವನ್ನು ಪ್ರತಿ ಮಾಡಿದರು. ಹಿಂತಿರುಗುವಾಗ ಮಧುರೆಗೆ ಹೋಗಿ ರಾಮದಾಸನಿಗೆ ತೋರಿಸಿದರು. ಇದರಿಂದ ಅವನ ದುಃಖ ಶಮನವಾಯಿತು.

ಕನ್ಯಾಕುಮಾರಿಯಿಂದ ಹಿಂತಿರುಗುವಾಗ ಶ್ರೀಚೈತನ್ಯರು ಕೇರಳವನ್ನೂ (ಆಗಿನ ತಿರುವಾಂಕೂರ್ ರಾಜ್ಯ) ಹಾದುಹೋದರು. ಅಲ್ಲಿ ತಿರುವತ್ತಾರ್ ಎಂಬ ಕಡೆ ಆದಿಕೇಶವ ದೇವಾಲಯವಿದೆ. ಅಲ್ಲಿ ಅವರಿಗೆ, ವೈಷ್ಣವಶಾಸ್ತ್ರದ ಗಣಿಯಾದ **ಬ್ರಹ್ಮಸಂಹಿತೆ**ಯ ಅಪರೂಪದ ಹಸ್ತಪ್ರತಿ ದೊರೆಯಿತು. ಕೆಲವೇ ವಾಕ್ಯಗಳಲ್ಲಿ ವೈಷ್ಣವರ ನಂಬಿಕೆಗಳು ಮತ್ತು ಪದ್ಧತಿಗಳನ್ನು ಅದರಲ್ಲಿ ವಿವರಿಸಲಾಗಿತ್ತು. ಶ್ರೀಚೈತನ್ಯರು ಅದರ ಪ್ರತಿಯೊಂದನ್ನು ಮಾಡಿದರು. ಅಮೂಲ್ಯ ಆಸ್ತಿಯೆಂಬಂತೆ ಅದನ್ನು ತೆಗೆದುಕೊಂಡು ಹೋದರು.

ನಂತರ ಉತ್ತರ ದಿಕ್ಕಿಗೆ ಪ್ರಯಾಣ. ಶ್ರೀಮಧ್ವಾಚಾರ್ಯರು ಶ್ರೀಕೃಷ್ಣಮೂರ್ತಿಯನ್ನು ಉಡುಪಿಯಲ್ಲಿ ಪ್ರತಿಷ್ಠಾಪಿಸಿದ್ದಾರೆ. ಅಲ್ಲಿಗೆ ಶ್ರೀಚೈತನ್ಯರು ಹೋದರು. ಶ್ರೀಚೈತನ್ಯರು ಮಧ್ವಮತದ ಅನುಯಾಯಿಗಳನ್ನು ತತ್ತ್ವವಾದಿಗಳು ಎಂದು ಕರೆಯುತ್ತಾರೆ. ಅಲ್ಲಿದ್ದವರು ಮೊದಮೊದಲು ಶ್ರೀಚೈತನ್ಯರನ್ನು ಮಾಯಾವಾದಿಯಾದ ಸಂನ್ಯಾಸಿಯೆಂದು ಉಪೇಕ್ಷಿಸಿದರು. ಕೃಷ್ಣಮಠದಲ್ಲಿ ಶ್ರೀಚೈತನ್ಯರು ತೋರಿದ ಭಕ್ತಿಭಾವ ಅವರ ಕಣ್ಣನ್ನು ತೆರೆಸಿತು. ಅವರು ತಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಕೊಂಡರು. ಚೈತನ್ಯಪ್ರಭುವು ಅವರೊಡನೆ ಅಜ್ಞಾನಿಯಂತೆ ನಡೆದುಕೊಂಡರು. ಶ್ರೀಕೃಷ್ಣಭಕ್ತನು ಅನುಸರಿಸಬೇಕಾದ ಸಾಧನಾ ಮಾರ್ಗ ಮತ್ತು ತಲುಪುವ ಗತಿಯನ್ನು ಕುರಿತು ಅಲ್ಲಿನ ಪ್ರಮುಖ ವಿದ್ವಾಂಸರನ್ನು ಪ್ರಶ್ನಿಸಿದರು. ಅವರು ಕೃಷ್ಣನಿಗೆ ಸಮರ್ಪಣೆ ಮಾಡಿ ಎಲ್ಲ ಕರ್ಮಗಳನ್ನು ಮಾಡುವುದೇ 'ಸಾಧನೆ'; ವೈಕುಂಠ ಪ್ರಾಪ್ತಿಯೇ 'ಗತಿ' ಎಂದು ಬೋಧಿಸಿದರು. ಆದರೆ ಶ್ರೀಚೈತನ್ಯರು ಪರಿಪೂರ್ಣ ವೈಷ್ಣವನು ಕರ್ಮ ಮತ್ತು ಮುಕ್ತಿ — ಇವೆರಡನ್ನೂ ನಿರಾಕರಿಸಬೇಕೆಂಬ ಶಾಸ್ತ್ರವಾಕ್ಯವನ್ನು ಉದಾಹರಿಸಿದರು. ವೈಕುಂಠಧಾಮದ ಐದು ಬಗೆಯ ಮುಕ್ತಿಯ ಹಂತಗಳನ್ನೂ ಭಕ್ತನು ಒಲ್ಲೆನೆನ್ನುವನು; ಶ್ರೀಕೃಷ್ಣನ ಸೇವೆಯೊಂದೇ ಪರಮಗತಿ ಎಂದು ಭಾವಿಸುವನು ಎಂದರು. ಆ ವಿದ್ವಾಂಸರಿಗೆ ಇದನ್ನು ವಿರೋಧಿಸಲಾಗಲಿಲ್ಲ. ಕಾರಣ, ಅದೇ ಅತ್ಯಂತ ಉತ್ಕೃಷ್ಟವಾದ ವೈಷ್ಣವ ಆದರ್ಶವಾಗಿದೆ.

ನಂತರ ಪಶ್ಚಿಮ ಮತ್ತು ಮಧ್ಯಭಾರತದ ಮೂಲಕ ಶ್ರೀಚೈತನ್ಯರು ಹಾದುಹೋದರು. ಗೊಂಡರ ನಾಡಿನಲ್ಲಿ ಅಲ್ಲಿನ ಬುಡಕಟ್ಟಿನ ನಾಯಕನಾದ ನವರೋಜಿ ಎನ್ನುವವನಿದ್ದನು. ಹಣವನ್ನು ಕೊಡದಿದ್ದರೆ, ಕೊಂದುಬಿಡುವುದಾಗಿ ಬೆದರಿಸಿದನು. ತಮ್ಮ ಇಚ್ಛಾಶಕ್ತಿಯಿಂದ ಚೈತನ್ಯರು ಅವನನ್ನು ಒಬ್ಬ ಭಕ್ತನನ್ನಾಗಿ ಪರಿವರ್ತಿಸಿದರು. ನವರೋಜಿ ತನ್ನ ವಾಮಮಾರ್ಗವನ್ನು ತ್ಯಜಿಸಿದನು; ತಾಪಸಿಯಾಗಿ ಚೈತನ್ಯರ ನಿರಂತರ ಅನುವರ್ತಿಯಾದನು. ನಂತರ ಶ್ರೀಚೈತನ್ಯರು ಭೇಟಿಕೊಟ್ಟದ್ದು ಮಹಾರಾಷ್ಟ್ರದ ಸುಪ್ರಸಿದ್ಧ ಯಾತ್ರಾಸ್ಥಳವಾದ ಪಂಢರಾಪುರಕ್ಕೆ. ಅಲ್ಲಿ ಅವರು ವಿಠ್ಠಲ ಮೂರ್ತಿಯನ್ನು ಆಲಿಂಗಿಸಿದರು; ಭಕ್ತಿಭಾವದಿಂದ ನರ್ತಿಸಿದರು. ಆ ಪ್ರದೇಶದ ಮಹಾಸಂತರಾದ ತುಕರಾಮರನ್ನು ಭೇಟಿಯಾಗಿ, ಅವರಿಗೆ ಕೃಷ್ಣಭಕ್ತಿಯನ್ನು ಉಪದೇಶಿಸಿದರೆಂಬ ಐತಿಹ್ಯವೂ ಇದೆ. ಪಂಢರಾಪುರದಲ್ಲಿ

ಅವರು ಶ್ರೀರಂಗ ಪುರಿಗಳೆಂಬ ಮಹಾತ್ಮರನ್ನು ದರ್ಶಿಸಿದರು. ತಮ್ಮ ಗುರುಗಳಾದ ಈಶ್ವರ ಪುರಿಗಳಂತೆ, ಇವರೂ ಮಾಧವೇಂದ್ರ ಪುರಿಗಳ ಶಿಷ್ಯರಾಗಿದ್ದರು. ಇವರು ನವದ್ವೀಪಕ್ಕೆ ಭೇಟಿ ಕೊಟ್ಟು, ಚೈತನ್ಯರ ತಂದೆಯ ಆತಿಥ್ಯ ಸ್ವೀಕರಿಸಿದ್ದರು. ತಮ್ಮ ಅಣ್ಣ, ವಿಶ್ವೇಶ್ವರರ ಅಂತ್ಯವು ಪಂಢರಾಪುರದಲ್ಲಿಯೇ ಆಯಿತೆಂದೂ ಅವರಿಗೆ ಆಗ ತಿಳಿದುಬಂತು.

ಪಶ್ಚಿಮ ಭಾರತದಲ್ಲಿ ಅವರು ವಾಸ್ತವ್ಯ ಹೂಡಿದ ಪ್ರಮುಖ ಕ್ಷೇತ್ರಗಳಲ್ಲಿ 'ದ್ವಾರಕಾ' ಪಟ್ಟಣವೂ ಒಂದು. ಅಲ್ಲಿ ಸಂಚಾರ ಮಾಡುತ್ತಿದ್ದಾಗ ಮಹಾನ್ ಗ್ರಂಥವಾದ 'ಕೃಷ್ಣಕರ್ಣಾಮೃತ' ಅವರಿಗೆ ಲಭಿಸಿತು. ಅದನ್ನು ಒಂದು ದೊಡ್ಡ ನಿಧಿಯೆಂಬಂತೆ ಅವರು ಸ್ವೀಕರಿಸಿದರು. ನಂತರ ಅವರು ಪುರೀಧಾಮದತ್ತ ಹೊರಟರು. ದಾರಿಯಲ್ಲಿ ಪುಣ್ಯನದಿಗಳಾದ ತಪತಿ, ನರ್ಮದಾ ಮತ್ತು ಗೋದಾವರಿಗಳ ತಟದಲ್ಲಿರುವ ಅನೇಕ ತೀರ್ಥಕ್ಷೇತ್ರಗಳನ್ನು ಸಂದರ್ಶಿಸಿದರು. ಕಡೆಗೆ ವಿದ್ಯಾನಗರವನ್ನು ಸೇರಿ, ತಮ್ಮ ಸ್ನೇಹಿತರೂ, ಮಹಾಭಕ್ತರೂ ಆದ ರಾಮಾನಂದ ರಾಯ್ ಅವರನ್ನು ಮತ್ತೆ ಭೇಟಿಯಾದರು.

**ಪುರೀಧಾಮಕ್ಕೆ ಪುನರಾಗಮನ**

ಚೈತನ್ಯರು ರಾಮಾನಂದ ರಾಯ್‌ರಿಗೆ ತಮ್ಮ ರಾಜ್ಯಪಾಲ ಹುದ್ದೆಗೆ ರಾಜೀನಾಮೆ ಕೊಡುವಂತೆ ಮತ್ತೆ ಸಲಹೆ ಇತ್ತರು; ಪುರೀಧಾಮಕ್ಕೆ ಬರುವಂತೆ ಆಹ್ವಾನಿಸಿದರು. ತಮ್ಮ ಅಂತಿಮ ಗುರಿಯಾದ ಪುರೀಧಾಮಕ್ಕೆ ಎರಡು ವರ್ಷಗಳ ನಂತರ ತಲುಪಿದರು. ತೀರ್ಥಪರ್ಯಟನ ಮತ್ತು ಕೃಷ್ಣಭಕ್ತಿ ಪ್ರಸಾರ – ಈ ಎರಡು ಕಾರ್ಯಗಳನ್ನೂ ಅವರು ಅತ್ಯಂತ ಸಮರ್ಪಕವಾಗಿ ಮಾಡಿದರು. ಅವರನ್ನು ವಾಸುದೇವ ಸಾರ್ವಭೌಮರು ಹಾರ್ದಿಕವಾಗಿ ಸ್ವಾಗತಿಸಿ ಪೂಜಿಸಿದರು. ಅವರ ಹತ್ತಿರ ಶ್ರೀಚೈತನ್ಯರು ತಮ್ಮ ಎರಡು ಪ್ರಮುಖ ಕಾರ್ಯಗಳ ಬಗ್ಗೆ ನಿವೇದಿಸಿಕೊಂಡರು. ಅವುಗಳಲ್ಲಿ ಒಂದು, ತಾವು ರಾಮಾನಂದ ರಾಯ್‌ರನ್ನು ಭೇಟಿಯಾಗಿದ್ದು. ಎರಡನೆಯದು, ಶ್ರೀಕೃಷ್ಣಭಕ್ತಿಯನ್ನು ಬೋಧಿಸುವ ಅನುಪಮ ಶಾಸ್ತ್ರಗ್ರಂಥಗಳಾದ **ಬ್ರಹ್ಮಸಂಹಿತಾ** ಮತ್ತು **ಕೃಷ್ಣಕರ್ಣಾಮೃತ**ಗಳನ್ನು ಪ್ರತಿ ಮಾಡಿ ತಂದದ್ದು. ಈ ಎರಡು ಗ್ರಂಥಗಳನ್ನು ಒರಿಸ್ಸಾ ಮತ್ತು ಬಂಗಾಳ ಪ್ರಾಂತ್ಯಗಳಲ್ಲಿ ಪಂಡಿತಪಾಮರರಿಬ್ಬರಿಗೂ ರಂಜನೀಯವಾಗುವಂತೆ ಶ್ರೀಚೈತನ್ಯರು ಪ್ರಚುರ ಪಡಿಸಿದರು.

ಚೈತನ್ಯರ ಆಗಮನವು ಪುರಿಯ ಜನತೆಗೆ ಅತ್ಯಂತ ಸಂತಸವನ್ನುಂಟುಮಾಡಿತು. ಕಾಶೀಮಿಶ್ರನೆಂಬುವನು, ಅವರ ವಾಸ್ತವ್ಯಕ್ಕಾಗಿ ತನ್ನ ಮನೆಯನ್ನೇ ಬಿಟ್ಟುಕೊಟ್ಟನು. ಸಾರ್ವಭೌಮರು ಜಗನ್ನಾಥ ದೇಗುಲದ ಅರ್ಚಕರ ಮತ್ತು ಪಟ್ಟಣದ ಪ್ರಮುಖ ನಾಗರಿಕರ ಪರಿಚಯವನ್ನು ಶ್ರೀಚೈತನ್ಯರಿಗೆ ಮಾಡಿಕೊಟ್ಟರು.

ಒರಿಸ್ಸಾದ ರಾಜ ಪ್ರತಾಪರುದ್ರನೇ ಸ್ವತಃ ಚೈತನ್ಯ ಮಹಾಪ್ರಭುಗಳನ್ನು ಕಾಣಲು ಒಪ್ಪಿಗೆಯನ್ನು ಕೇಳಿದನು. ಅವನು ಭಗವದ್ಭಕ್ತ ಆದರೂ ಚೈತನ್ಯರು ಅವನನ್ನು ಕಾಣಲು ನಿರಾಕರಿಸಿದರು. ಸನ್ಯಾಸಿಯಾದವನು ಪ್ರಾಪಂಚಿಕ ಪದವಿ ಮತ್ತು ಪ್ರಾಮುಖ್ಯತೆ ಹೊಂದಿರುವವರ ಜೊತೆಗೆ ಸಂಪರ್ಕವಿರಿಸಿಕೊಳ್ಳಬಾರದು ಎನ್ನುವುದೇ ಅದಕ್ಕೆ ಕಾರಣ. ಆದರೆ ಸಾರ್ವಭೌಮ ಮುಂತಾದ ಭಕ್ತರು ರಾಜನನ್ನು ಸಾಧಾರಣ ಭಕ್ತನ ವೇಷದಲ್ಲಿ ಕರೆತಂದು ಶ್ರೀಚೈತನ್ಯರ ಮುಂದೆ ನಿಲ್ಲಿಸಿದರು. ಅಂದು ರಥಯಾತ್ರೆಯ ದಿನ. ಶ್ರೀಚೈತನ್ಯರು ಜಗನ್ನಾಥಸ್ವಾಮಿಯ ರಥದ ಮುಂದೆ ಮೆರವಣಿಗೆಯಲ್ಲಿ ಹೋಗುತ್ತ, ಹರಿನಾಮಸಂಕೀರ್ತನೆಯಲ್ಲಿ ತಲ್ಲೀನರಾಗಿದ್ದರು. ಮಹಾಪ್ರಭುವು ಹೀಗೆ ಭಾವಸ್ಥಿತಿಯಲ್ಲಿರುವಾಗ, ರಾಜ ಪ್ರತಾಪರುದ್ರನು ಅವರ ಕಾಲಿಗೆ ಬಿದ್ದನು; ಭಾಗವತದ ಕೆಲವು ಶ್ಲೋಕಗಳನ್ನು ಸ್ವರಬದ್ಧವಾಗಿ ಹಾಡಿದನು. ಇದರಿಂದ ಚೈತನ್ಯರ ಹೃದಯ ಕರಗಿತು. ಅತ್ಯುನ್ನತ ಆಧ್ಯಾತ್ಮಿಕ ಭಾವದಲ್ಲಿದ್ದ ಅವರು ರಾಜನನ್ನು ಆಲಿಂಗಿಸಿಕೊಳ್ಳುವ ಮೂಲಕ ಅವನಲ್ಲೂ ಶ್ರೀಕೃಷ್ಣಭಕ್ತಿಯನ್ನು ಹರಿಸಿದರು.

ನೀಲಾಚಲಕ್ಕೆ (ಪುರೀ) ಚೈತನ್ಯ ಮಹಾಪ್ರಭುಗಳು ಪುನಃ ಬಂದರೆಂಬ ಸುದ್ದಿ ನವದ್ವೀಪದ ಭಕ್ತರಿಗೆ ತಲುಪಿ ಅವರನ್ನು ಕಾಣಬೇಕೆಂಬ ಆಶೆ ಉಂಟಾಯಿತು. ಗುಂಪುಗುಂಪಾಗಿ ಅವರೆಲ್ಲ ಪುರಿಗೆ ಬಂದು ನಾಲ್ಕು ತಿಂಗಳ ಕಾಲ ತಂಗಿದ್ದರು. ಅವರ ಸಂಖ್ಯೆ ಸುಮಾರು ಇನ್ನೂರರಷ್ಟಿತ್ತು. ಸಾರ್ವಭೌಮರು ದೇವಾಲಯದ ಅಧಿಕಾರಿಗಳ ವತಿಯಿಂದ ಅವರಿಗೆಲ್ಲ ಆತಿಥ್ಯವನ್ನು ಏರ್ಪಡಿಸಿದ್ದರು. ಪ್ರತಿದಿನವೂ ಶ್ರೀಚೈತನ್ಯರು ಅವರೊಡನೆ ಹರಿಸಂಕೀರ್ತನೆ ನಡೆಸುತ್ತಿದ್ದರು. ಅವರನ್ನು ನಾಲ್ಕು ಗುಂಪುಗಳಾಗಿ ವಿಂಗಡಿಸಿ, ಮಧ್ಯೆ ತಾವು ನಿಲ್ಲುತ್ತಿದ್ದರು. ಒಂಬತ್ತು ಢೋಲ್‌ಗಳು (ಮೃದಂಗ) ಮತ್ತು ಮೂವತ್ತೆರಡು ತಾಳವಾದ್ಯಗಳನ್ನು ಸಂಕೀರ್ತನೆಗೆ ಉಪಯೋಗಿಸುತ್ತಿದ್ದರು. ಅವುಗಳ ನಿನಾದದ ಜೊತೆಗೆ 'ಹರಿಬೋಲ್' ಎನ್ನುವ ಅವರೆಲ್ಲರ ಘೋಷ ದಿಕ್ಕುದಿಕ್ಕುಗಳಲ್ಲಿ ಪ್ರತಿಧ್ವನಿಸುತ್ತಿತ್ತು. ಆ ಭಕ್ತಿಯ ಪ್ರವಾಹಕ್ಕೆ ಹರಿನಾಮವೇ ಅಲೆಗಳಾಗಿದ್ದವು. ಆ ಪ್ರವಾಹ ಪುರೀ ನಗರವನ್ನೆಲ್ಲ ತೊಯ್ಯಿಸಿತು. ನಂತರ, ನಾಲ್ಕು ಸಂಕೀರ್ತನೆ ಗುಂಪುಗಳನ್ನು ಕರೆದುಕೊಂಡು ಶ್ರೀಚೈತನ್ಯರು ದೇವಾಲಯವನ್ನು ಪ್ರದಕ್ಷಿಣೆ ಮಾಡುತ್ತ, ಸಂಕೀರ್ತನೆ ಮಾಡುತ್ತಿದ್ದರು. ಒಮ್ಮೊಮ್ಮೆ ಉನ್ಮಾದದಿಂದ ಕೆಳಕ್ಕೆ ಬೀಳುವರು. ಕೆಳಕ್ಕೆ ಬಿದ್ದು ಪೆಟ್ಟಾಗದಂತೆ, ರಾಮಾನಂದ ರಾಯ್ ಅವರನ್ನು ಎತ್ತಿಹಿಡಿಯಬೇಕಾಗುತ್ತಿತ್ತು. ಹೀಗೆ ತಮ್ಮ ಅನುಯಾಯಿಗಳ ಸಂಗಡ ನಿರಂತರ ಸಂಕೀರ್ತನೆಯಲ್ಲಿ ತೊಡಗಿ ಅವರು ಮಹದಾನಂದದಿಂದ ಕಾಲ ಕಳೆಯುತ್ತಿದ್ದರು.

(ಮುಂದುವರಿಯುತ್ತದೆ)